## ದಿನಾಂಕ: 09–06–2023ರಂದು ನಡೆದ 43ನೇ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 43ನೇ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:09.06.2023 ರಂದು ಶುಕ್ರವಾರ ಬೆಳಗ್ಗೆ 10.30ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. ಡಾ. ಎಸ್. ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ನರಸಿಂಹಪ್ಪ, ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಮತ್ತು ಯೋಜನೆ), ಕರ್ನಾಟಕ ಸರ್ಕಾರ — ಸದಸ್ಯರು
3. ಶ್ರೀಮತಿ ಉಮಾ ಕೆ, ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ನರಸಿಂಹಪ್ಪ, ಕುಲಸಚಿವ, ಕಸಂವಿ — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ಶ್ರೀ ಎಸ್. ಕುಮಾರ, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

**ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.**

| | |
|---|---|
| **ವಿಷಯ 1** | **42ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ.** |
| **ಟಿಪ್ಪಣಿ** | ದಿನಾಂಕ: 16.08.2022ರ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಅನುಮೋದಿಸಿತು.** |
| **ವಿಷಯ 2** | **42ನೇ ಸಭೆಯ ನಡಾವಳಿಯಂತೆ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ದಿನಾಂಕ: 16.08.2022ರ ಸಭೆಯ ನಿರ್ಣಯದಂತೆ ಕ್ರಮವಹಿಸಿದ್ದು, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಅನುಮೋದಿಸಿತು.** |
| **ವಿಷಯ 3** | **2022–23ನೇ ಸಾಲಿನ ಜುಲೈ– 2022 ರಿಂದ ಮಾರ್ಚ್– 2023ರ ವರೆಗಿನ 09 ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | 2022–23ನೇ ಸಾಲಿನ ಜುಲೈ– 2022 ರಿಂದ ಮಾರ್ಚ್ – 2023ರ ವರೆಗಿನ 09 ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | ಜಮಾ–ಖರ್ಚನ್ನು ಅನುಮೋದಿಸಿತು. |

| | |
|---|---|
| ವಿಷಯ 4 | **2022–23ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸ್ಥಿರೀಕರಿಸುವ ಬಗೆಗೆ.** |
| ಟಿಪ್ಪಣಿ | ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಬದಂತಹ ಅನುದಾನ/ಆಂತರಿಕ ಹಾಗೂ ಯೋಜನೆಗಳ ಮೂಲಗಳಿಂದ ಬಂದಂತಹ ಆದಾಯದನ್ವಯ ಅಂದಾಜಿನೊಡನೆ ಪರಿಷ್ಕೃತ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2022–23ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸ್ಥಿರೀಕರಿಸಿತು. ಹಾಗೆಯೇ ಸಮಿತಿಯು ಈ ಕೆಳಕಂಡ ಅಂಶಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸೂಚಿಸಿತು.**<br>**1. ಕ್ರಿಯಾ ಯೋಜನೆಯನ್ನು ಗಮನಿಸಲಾಗಿ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ SC/ST ವಿದ್ಯಾರ್ಥಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಾಕಿ ಉಳಿಸಿಕೊಂಡಿರುವ ಅನುದಾನದ ಮೊತ್ತ 4,27,68,884/– ರೂಗಳನ್ನು ಖರ್ಚು ಮಾಡುವ ಮುನ್ನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ನಿರ್ದೇಶನದ ನಂತರ ಅನುಷ್ಠಾನಗೊಳಿಸಲು ಸೂಚಿಸಿತು.**<br>**2. ಸಂಬಂಧಿಸಿದ ಯೋಜನೆಗೆ ಒಳಪಡುವ ವಿಶ್ವವಿದ್ಯಾಲಯ/ಕಾಲೇಜುಗಳು/ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ತರಿಸಿಕೊಂಡು, ಸದರಿ ಫಲಾನುಭವಿಗಳಿಗೆ ಸೌಲಭ್ಯವನ್ನು ವಿಸ್ತರಿಸಲು ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಮೂಲ ಯೋಜನೆಯಂತೆ ಜಾರಿಗೆ ತರಲು ಸೂಚಿಸಿತು.** |
| ವಿಷಯ 5 | **7 ಸಹಾಯಕ ಪ್ರಾಧ್ಯಾಪಕರಿಗೆ ಹಾಗೂ ಒಬ್ಬ ಸಹಾಯಕ ಗ್ರಂಥಪಾಲಕರಿಗೆ CAS ಪದೋನ್ನತಿ ಸಮಿತಿಯ ವರದಿಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 7 ಸಹಾಯಕ ಪ್ರಾಧ್ಯಾಪಕರಿಗೆ ಹಾಗೂ ಒಬ್ಬ ಸಹಾಯಕ ಗ್ರಂಥಪಾಲಕರಿಗೆ CAS ಪದೋನ್ನತಿ ಸಮಿತಿಯು ಸಂದರ್ಶನ ನಡೆಸಿ ವರದಿಯನ್ನು ನೀಡಿದೆ. ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **CAS ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಿತು. ಹಾಗೆಯೇ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲು ಒಪ್ಪಿತು.** |
| ವಿಷಯ 6 | **ಸಿಸ್ಟಂ ಅನಾಲಿಸ್ಟ್ ಹುದ್ದೆಯನ್ನು ಯು.ಜಿ.ಸಿ ವೇತನ ಶ್ರೇಣಿಗೆ ಪರಿಗಣಿಸುವ ಬಗೆಗೆ.** |
| ಟಿಪ್ಪಣಿ | ಶ್ರೀ ಕೆ. ಮಹಾವೀರ್, ಸಿಸ್ಟಂ ಅನಾಲಿಸ್ಟ್ – ಕಸಂವಿ, ಇವರು ಮನವಿ ಸಲ್ಲಿಸಿದ್ದು, ಇವರ ಹುದ್ದೆಯನ್ನು ಯು.ಜಿ.ಸಿ ವೇತನ ಶ್ರೇಣಿಗೆ ಪರಿಗಣಿಸುವಂತೆ ಕೋರಿದ್ದರಿಂದ, ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸಮಿತಿ ರಚಿಸಿದ್ದಂತೆ, ಸಲ್ಲಿಸಿರುವ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. ಹಾಗೆಯೇ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 3363/2002 (S-Pro), ಆದೇಶ ದಿನಾಂಕ: 04.08.2005ರಲ್ಲಿ ಸಿಸ್ಟಂ ಅನಾಲಿಸ್ಟ್ ಹುದ್ದೆಯನ್ನು ಯು.ಜಿ.ಸಿಯ ರೀಡರ್ ಹುದ್ದೆಗೆ ಸಮಾನಾಂತರವೆಂದು ಪರಿಗಣಿಸಿ ಸವಲತ್ತುಗಳನ್ನು ಆಯಾಯ ವಿಶ್ವವಿದ್ಯಾಲಯದಲ್ಲಿ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಈ ಆದೇಶ ಹೊರಡಿಸಿದ 4 ತಿಂಗಳೊಳಗಾಗಿ ಈ ಸೌಲಭ್ಯವನ್ನು ಒದಗಿಸಲು ನಿಯಮಾನುಸಾರ ಕ್ರಮವಹಿಸಲು ತೀರ್ಪಿನಲ್ಲಿ ಉಲ್ಲೇಖವಿದ್ದು, ಈ ಅಂಶವನ್ನು ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಿಸ್ಟಂ ಅನಾಲಿಸ್ಟ್ ಹುದ್ದೆಯು ತಾಂತ್ರಿಕ ಹುದ್ದೆಯಾಗಿರುತ್ತದೆ. ಸದರಿ ಹುದ್ದೆಯು ಯು.ಜಿ.ಸಿ ನಿಯಮಾಳಿಯ ಪ್ರಕಾರ ಬೋಧಕ ಮತ್ತು ಸಂಶೋಧಕ ಹುದ್ದೆಯಾಗದಿರುವುದರಿಂದ ಅವಕಾಶವಿರುವುದಿಲ್ಲ. ವೇತನ ಶ್ರೇಣಿ ಮತ್ತು ಉನ್ನತೀಕರಣಕ್ಕೆ ಸಂಬಂಧಿದಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಅವಗಾಹನೆಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ಸಲ್ಲಿಸಲು ಒಪ್ಪಿತು.** |

| | |
|---|---|
| ವಿಷಯ 7 | **ಹೊರಗುತ್ತಿಗೆ ಆಧಾರದ ಮೇಲೆ ನೇಮಕಕೊಂಡ (Web Designer) ಸಂಚಿತ ಮೊತ್ತ ರೂ. 30,000/- ಗಳಿಗೆ ಘಟನೋತ್ತರ ಅನುಮೋದನೆಯ ಬಗೆಗೆ.** |
| ಟಿಪ್ಪಣಿ | ನ್ಯಾಕ್ ಕಾರ್ಯಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ಸಿಬ್ಬಂದಿಯನ್ನು Web Designer ರಾಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ನೇಮಿಸಿಕೊಂಡಿದ್ದು, ಇವರ ಸಂಚಿತ ಮೊತ್ತ ರೂ. 30,000/- ಗಳಿಗೆ ನಿಗದಿಪಡಿಸಿದ್ದು, ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಆಂತರಿಕ ಸಂಪನ್ಮೂಲದಿಂದ ತಾತ್ಕಾಲಿಕವಾಗಿ ಸೇವೆಯನ್ನು ಪಡೆಯಲು ಒಪ್ಪಿತು.** |
| ವಿಷಯ 8 | **2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಹಾಗೆಯೇ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವ ಮುನ್ನ ಬೇರೆ ವಿಶ್ವವಿದ್ಯಾಲಯಗಳ ಮಾದರಿಯನ್ನು ಪಡೆದು, ಅದರಂತೆ ಕ್ರಮವಹಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಿತು.** |
| ವಿಷಯ 9 | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು- ವೆಚ್ಚಗಳನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಕಮಿಟಿಯು ಭೇಟಿ ನೀಡಿದ್ದರಿಂದ ಪೂರ್ವಭಾವಿಯಾಗಿ ಮೂಲ ಸೌಕರ್ಯಗಳ ಹಾಗೂ ಸಿದ್ಧತೆಗಾಗಿ ಅಂದಾಜು ರೂ. 50,51,875/- ವೆಚ್ಚವಾಗಿದ್ದು ಇದರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ 10 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನಾ ಪರಿನಿಯಮ 2019ರ ಕರಡನ್ನು ಪುನರ್ ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪ್ರಾರಂಭಕ್ಕೆ ಸಂಯೋಜನೆ ಮಾನ್ಯತೆಗೆ ಸಂಬಂಧಿಸಿದಂತೆ ಸಂಯೋಜನಾ ಪರಿನಿಯಮ 2019ನ್ನು ದಿನಾಂಕ: 12.01.2021ರಂದು ನಡೆದ 38ನೇ ಹಣಕಾಸು ಸಮಿತಿ ಸಭೆಯು ಅನುಮೋದನೆ ನೀಡಿದ್ದು, ಪುನರ್ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಹಾಗೆಯೇ ಕರಡು ಸಂಯೋಜನಾ ಪರಿನಿಯಮವನ್ನು ಮುಂಬರುವ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿತು.** |
| ವಿಷಯ 11 | **ವಿಶ್ವವಿದ್ಯಾಲಯ/ ಅಧೀನ ವಿದ್ಯಾಲಯದ ಮೌಲ್ಯಮಾಪಕರುಗಳ ಭತ್ಯೆಗಳನ್ನು ಹೆಚ್ಚಿಸುವ ಬಗೆಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯವು ಇಲ್ಲಿಯವರೆಗೆ ಮೌಲ್ಯ ಮಾಪಕರುಗಳಿಗೆ ಭತ್ಯೆಗಳನ್ನು (ಪ್ರಯಾಣ/ ಮೌಲ್ಯಮಾಪನ/ಸ್ಥಳೀಯ ಭತ್ಯೆ/ದಿನ ಭತ್ಯೆ/ಗೌರವ ಸಂಭಾವನೆ(ಪಿ.ಹೆಚ್.ಡಿ), ಸರ್ಕಾರವು ನಿಗದಿಪಡಿಸಿರುವ ಭತ್ಯೆಗಳಿಗಿಂತ ಕಡಿಮೆ ದರದಲ್ಲಿ ಸಂಪನ್ಮೂಲವನ್ನು ಆಧರಿಸಿ ನಿರ್ವಹಣೆ ಮಾಡುತ್ತಿದೆ. ಪ್ರಸ್ತುತ ಸರ್ಕಾರದ ನಿಯಮಾನುಸಾರ ಹಾಗೂ ಹಲವು ವಿಶ್ವವಿದ್ಯಾಲಯವು ಸಂಬಂಧಿಸಿದ ವಿಷಯಗಳಿಗೆ ಈಗಾಗಲೇ ನಿಗದಿಪಡಿಸಿರುವ ಭತ್ಯೆಯಂತೆ ಪರಿಷ್ಕರಿಸ ಬೇಕಿದೆ. ಈ ಸಂಬಂಧ ಉಪ ಸಮಿತಿ ರಚಿಸಿ ಅದರಂತೆ ಜಾರಿಗೆ ತರಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಮಗ್ರವಾಗಿ ಚರ್ಚಿಸಿದ ನಂತರ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನ ಭಾರತಿ) ಮತ್ತು ತುಮಕೂರು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿರುವಂತೆ, ಪರೀಕ್ಷಾಂಗಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಭತ್ಯೆಗಳನ್ನು ಅಳವಡಿಸಿಕೊಂಡು ವಿಸ್ತರಿಸಲು ಒಪ್ಪಿತು. ಮುಂದುವರೆದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾಯ್ದೆ, ವೃಂದ ಮತ್ತು ನೇಮಕಾತಿ ನಿಯಮಾಳಿಯ ಪ್ರಕಾರ ಕುಲಸಚಿವ(ಮೌಲ್ಯಮಾಪನ) ಹುದ್ದೆಯಿದ್ದು, ಈಗಿರುವ ಪರೀಕ್ಷಾ ನಿಯಂತ್ರಕ ಹುದ್ದೆಯ ಬದಲಾಗಿ ಕುಲಸಚಿವ(ಪರೀಕ್ಷಾಂಗ) ಎಂದು ಮಾರ್ಪಡಿಸಲು ಸೂಚಿಸಿತು.** |
| ವಿಷಯ 12 | **ಹಣಕಾಸು ಅಧಿಕಾರವನ್ನು ಪದಗ್ರಹಣದ ಬಗೆಗೆ.** |
| ಟಿಪ್ಪಣಿ | ಕರ್ನಾಟ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯಾಗಿ ಅಧಿಕ ಪ್ರಭಾರದಲ್ಲಿರಿಸಿರುವ ಡಾ. ಜಯಲಕ್ಷ್ಮೀ ಹೆಚ್.ವೈ ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಕರ್ನಾಟಕ ರಾಜ್ಯ ಉಗ್ರಾಣ ನಿಗಮ, |

| | |
|---|---|
| | ಇವರನ್ನು ಸ.ಆ.ಸಂ: ಇಡಿ 364 ಯುಎನ್‌ಇ 2021, ದಿನಾಂಕ: 24.04.2023ರಲ್ಲಿ ಇವರನ್ನು ಆರ್ಥಿಕ ಇಲಾಖೆಗೆ ಹಿಂದಿರುಗಿಸಿರುವುದರಿಂದ, ಸ.ಆ.ಸಂ: ಇಡಿ 364 ಯುಎಂವಿ 2021, ದಿನಾಂಕ: 24.04.2023, ಆದೇಶದಲ್ಲಿ ಶ್ರೀ ಎಸ್ ಕುಮಾರ, ಕುಲಸಚಿವರು(ಆಡಳಿತ) ಭಗವದ್ ರಾಮಾನುಜಾಚಾರ್ಯ ರಾಷ್ಟ್ರೀಯ ಸಂಶೋಧನ ಸಂಸತ್ ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದೆ, ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸಭೆಯು ಗಮನಿಸಿತು. |

| | |
|---|---|
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರ ವಿಷಯಗಳು** |
| **ವಿಷಯ 01** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ ಅವಶ್ಯವಾಗಿ ಬೇಕಾಗಿರುವ ಕೆಳಕಂಡ ಪರಿನಿಯಮ ಮತ್ತು ರೆಗುಲೇಷನ್‌ಗಳನ್ನು ಸಿದ್ಧಪಡಿಸಿದ್ದು ಇವುಗಳ ಕರಡುಗಳನ್ನು ಹಣಕಾಸು ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ.** |
| **ಟಿಪ್ಪಣಿ** | ವಿಶ್ವವಿದ್ಯಾಲಯದ ವಿವಿಧ ಪರಿನಿಯಮಗಳನ್ನು ಅನುಮೋದನೆಗಾಗಿ ಸಮಿತಿಯ ಮುಂದೆ ಮಂಡಿಸಿದೆ, ಮಾನ್ಯ ಕುಲಪತಿಗಳ ಸೂಚನೆಯ ಮೇರೆಗೆ ಮತ್ತು ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಶ್ವವಿದ್ಯಾಲಯಕ್ಕೆ ಅವಶ್ಯವಾಗಿ ಬೇಕಾಗಿರುವ ಪರಿನಿಯಮ ಮತ್ತು ರೆಗುಲೇಷನ್‌ಗಳ ಕರಡನ್ನು ತಯಾರಿಸಿದೆ.<br>1)Regulations Governing Certificate, Diploma and Post Graduate Diploma courses.<br>2)Statute Governing Convocation for Conferring Degrees.<br>3)Statute Governing the Board of Studies.<br>4)Statute Governing Conferring Honorary Degrees and Academic Distinctions.<br>5)Statute Governing Rules of Business of the Syndicate, The Academic Council, The committee and The Faculties.<br>6)Statute Governing the Establishment of Sanskrit Evening College.<br>7)Regulations Governing the Degree of Doctor of Philosophy (Ph.D.)<br>ಮೇಲ್ಕಂಡ ಪರಿನಿಯಮಗಳನ್ನು ಹಣಕಾಸು ಸಮಿತಿಯ ಮುಂದೆ ಅನುಮೋದಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಹಾಗೆಯೇ ಕ್ರಮ ಸಂಖ್ಯೆ (01) ರಿಂದ (07)ವರೆಗಿನ ಕರಡು ಪರಿನಿಯಮ ಮತ್ತು ರೆಗುಲೇಷನ್‌ಗಳನ್ನು ಮುಂಬರುವ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿತು.** |
| **ವಿಷಯ 02** | **ಸರ್ಕಾರಿ/ಘಟಕ ಹಾಗೂ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಮಾನ್ಯತಾ ಹಾಗೂ ಕೋರ್ಸುಗಳ ಶುಲ್ಕವನ್ನು ನಿಗಧಿ ಪಡಿಸಲು ಅನುಮೋದನೆಗಾಗಿ ಮಂಡಿಸಿದೆ.** |
| **ಟಿಪ್ಪಣಿ** | ಈಗಾಗಲೇ ಮಾನ್ಯತೆ ಇರುವ ಕಾಲೇಜುಗಳಿಗೆ ಮಾನ್ಯತಾ ಶುಲ್ಕವನ್ನು ರೂ. 5,000/- ಮತ್ತು ಜಿ.ಎಸ್.ಟಿ 18% ಸೇರಿ ನಿಗದಿಪಡಿಸಿದಂತೆ ಜಾರಿಯಲ್ಲಿರುತ್ತದೆ, ಮುಂದುವರೆದು ಸರ್ಕಾರಿ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು, ಶ್ರೀ ಮನ್ಮಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು, ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ, ಮೇಧಾ ದಕ್ಷಿಣಾಮೂರ್ತಿ ವೇದ ಭವನ ಸಂಸ್ಕೃತ ಕಾಲೇಜು, ಗೋಕರ್ಣ, ಇಲ್ಲಿಗೆ ಮಾನ್ಯತಾ ಶುಲ್ಕ ನಿಗಧಿಪಡಿಸದ ಕಾರಣ ಮಾನ್ಯತೆಯ ವಿಷಯವು ಗೊಂದಲವಾಗಿರುತ್ತದೆ. ಮಾನ್ಯತಾ ಶುಲ್ಕ ಪಾವತಿಸಿದ್ದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಂತಾಗುತ್ತದೆ. ಈ ವಿಷಯದಲ್ಲಿ ಸೂಕ್ತ ತೀರ್ಮಾನಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಚರ್ಚಿಸಿದ ನಂತರ ಸದರಿ ಕಾಲೇಜುಗಳಿಗೆ ರೂ. 100/– ಮತ್ತು ಜಿ.ಎಸ್.ಟಿ 18% ಸೇರಿ ಮಾನ್ಯತಾ ಶುಲ್ಕವನ್ನು ನಿಗಧಿಪಡಿಸಲು ಒಪ್ಪಿತು.** |
| **ವಿಷಯ 03** | **ಬಿ.ಎಸ್.ಸಿ ಮತ್ತು ಎಂ.ಎಸ್.ಸಿ ಯೋಗ ವಿಷಯದ ಪ್ರವೇಶಾತಿಯ ಶುಲ್ಕವನ್ನು ಅನುಮೋದನೆಗಾಗಿ ಮಂಡಿಸಿದೆ.** |
| **ಟಿಪ್ಪಣಿ** | ವಿಶ್ವವಿದ್ಯಾಲಯದ ಯೋಗ ವಿಭಾಗಾಧ್ಯಕ್ಷರು 2022–2023ನೇ ಸಾಲಿನಲ್ಲಿ ಬಿ.ಎಸ್.ಸಿ ಮತ್ತು ಎಂ.ಎಸ್.ಸಿ |

| | |
|---|---|
| | ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ವಿಷಯವು ಆರಂಭವಾಗಿದ್ದು, ಆ ವರ್ಷದಲ್ಲಿ ರೂ. 17,500/– ವನ್ನು ಪ್ರವೇಶಾತಿ ಶುಲ್ಕವು ನಿರ್ಧರಿಸಲಾಗಿದಂತೆ ಪ್ರಾರಂಭಗೊಂಡಿದೆ. ಪ್ರಸ್ತುತ ವರ್ಷಕ್ಕೆ ಅಂದರೆ 2023–2024ನೇ ಸಾಲಿಗೆ ಬಿ.ಎಸ್.ಸಿ ಯೋಗ ವಿಜ್ಞಾನದ ಪ್ರವೇಶಾತಿಗಾಗಿ ಶುಲ್ಕವನ್ನು ನಿರ್ಣಯ ಮಾಡಬೇಕೆಂದು ಪ್ರಾರ್ಥನಾ ಪತ್ರವನ್ನು ಸಲ್ಲಿಸಿದ್ದು, ಪ್ರವೇಶಾತಿ ಶುಲ್ಕ ನಿಗಧಿಪಡಿಸುವ ವಿಷಯದಲ್ಲಿ ಮುಂದಿನ ತೀರ್ಮಾನಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಚರ್ಚಿಸಿದ ನಂತರ, ಸದರಿ ಕೋರ್ಸ್‌ಗಳಿಗೆ ಮಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯವು ನಿಗಧಿಪಡಿಸಿರುವ ಪ್ರವೇಶಾತಿ ಶುಲ್ಕವನ್ನು ಅಳವಡಿಸಲು ಒಪ್ಪಿತು.** |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

**(ಎಸ್. ಕುಮಾರ)**
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

**(ಡಾ. ಎಸ್. ಅಹಲ್ಯ)**
**ಕುಲಪತಿಗಳು**
ಅಧ್ಯಕ್ಷರು

**ದಿನಾಂಕ: 09.06.2023**

4